# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು

## ಸಿಸಿ ಸಂಖ್ಯೆ : 1130/2018

ಫಿರ್ಯಾದುದಾರರು : **ಹುಲ್ಲಹಳ್ಳಿ ಠಾಣೆ,** ನಂಜನಗೂಡು

ವಿರುದ್ಧ

ಆರೋಪಿ : 1. ನಾಗಪ್ಪ ಬಿನ್ ಲೇಟ್ ಸಣ್ಣಪ್ಪ, 65 ವರ್ಷ
**2. ಸತೀಶ ಬಿನ್ ನಾಗಪ್ಪ,** 27 ವರ್ಷ

1 ಮತ್ತು 2 ನೇ ಆರೋಪಿಗಳು ಲಿಂಗಾಯತ ಬೀದಿ,
ಅಂಚಿಪುರ ಗ್ರಾಮ,
ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ ವಾಸಿಗಳು

** ***

## :: ದೋಷಾರೋಪಣೆ ::

**ಶ್ರೀಮತಿ ಶೈಲಾ ಎಸ್ .ಎಮ್.** ಪ್ರಧಾನ **ಸಿವಿಲ್ ನ್ಯಾಯಾಧೀಶರು ಹಾಗೂ ಜೆ.**ಎಂ.ಎಫ್.**ಸಿ.,** ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ **28.03.2018** ರಂದು ಬೆಳಗ್ಗೆ **07.00** ಗಂಟೆ ಸಮಯದಲ್ಲಿ ಹುಲ್ಲಹಳ್ಳಿ ಪೊಲೀಸ್ ಠಾಣೆ ಸರಹದ್ದಿಗೆ ಸೇರಿದ ಅಂಚಿಪುರ ಗ್ರಾಮದ ಚಾಸಾ **1** ರವರ ಮನೆಯ ಮುಂಭಾಗ ಆರೋಪಿಗಳಾದ ನೀವು ಏಕೋದ್ದೇಶದಿಂದ ಜಾಗದ ವಿಚಾರದಲ್ಲಿ ಚಾಸಾ **1** ರವರನ್ನು ಕುರಿತು ಬೋಳಿ ಮಗನೇ, ಎಂದು ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ನೀವು ಭಾ. ದಂ. **ಸಂ.** ಕಲಂ **504 ಸಹವಾಚಕ ಕಲಂ 34** ರಡಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ , ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ತೀಟಿ ಜಗಳ ತೆಗೆದು ಚಾಸಾ **1** ರವರಿಗೆ **1** ನೇ ಆರೋಪಿಯಾದ ನೀವು ಕಲ್ಲಿನಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯಪಡಿಸಿ **2** ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ **2** ರವರ ಎಡಕಾಲಿಗೆ ಹೊಡೆದು ನೋವುಂಟು ಮಾಡಿರುವ ಕಾರಣ ನೀವು ಭಾ. ದಂ. **ಸಂ.** ಕಲಂ **324 ಸಹವಾಚಕ ಕಲಂ 34** ರಡಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ , ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ 1 ರವರ ಮೇಲೆ ತೀಟೆ ಜಗಳ ತೆಗೆದು 1 ನೇ ಆರೋಪಿಯಾದ ನೀವು ಚಾಸಾ 1 ರವರಿಗೆ ಕೈಯಿಂದ ಎದೆಗೆ ಗುದ್ದಿದ್ದು 2 ನೇ ಆರೋಪಿಯಾದ ನೀವು ಕೈಯಿಂದ ಚಾಸಾ 2 ರವರ ಭುಜಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವ ಕಾರಣ ನೀವು ಭಾ. ದಂ. **ಸಂ.** ಕಲಂ 323 **ಸಹವಾಚಕ ಕಲಂ** 34 ರಡಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಿಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ.,
ನಂಜನಗೂಡು